# ಹರಿವು

**ಕಾಸಿಂ ನದಾಫ್ ಭೈರಾಪುರ**
ಕಲೆ: ವೆಂಕಟ್ರಮಣ ಭಟ್

ನೆತ್ತಿಯ ಮೇಲಿನ ಬಿಸಿಲು ಮರಿಯಪ್ಪನನ್ನು ದಹಿಸಿಬಿಡುತ್ತದೇನೊ ಎಂಬಂತೆ ಸುರಿಯತೊಡಗಿತ್ತು. ಮರಿಯಪ್ಪ ಕತ್ತೆತ್ತಿ ನೋಡಿದ. ಮುಖಕ್ಕೆ ಬಾರಿಸಿದಂತಾಯಿತು. ಒಂದು ಮೋಡವನ್ನೂ ಹೊತ್ತು ಬಸಿರಾಗದ ಆಕಾಶ ತನ್ನನ್ನು ನುಂಗಿಬಿಡುತ್ತದೇನೊ ಎಂಬಂತೆ ಭಾಸವಾಗತೊಡಗಿತು. ಕಣ್ಣನ್ನೇ ಆ ಸೂರ್ಯನ ಬೆಂಕಿ ಕಿರಣಗಳು ಹಗ್ಗ ಹಾಕಿ ಜಗ್ಗಿದಂತಾಗಿ ಸರಕ್ಕನೆ ಕಣ್ಮುಚ್ಚಿಕೊಂಡ. ಆತನ ಮುಖದ ಮೇಲಿನ ಭಾವುಕತೆ ಮತ್ತಷ್ಟು ತೀವ್ರವಾಗತೊಡಗಿತು. ಕತ್ತನ್ನು ಮೆಲ್ಲನೆ ಕೆಳಗಿಳಿಸಿ ಕಣ್ತೆರೆದ. ಕೆಳಗಿದ್ದ ಭೂಮ್ತಾಯಿ ಬರದ ಛಾಯೆ ಆವರಿಸಿ, ದಾಹದಿಂದ ಬಸವಳಿದು ಬಿರುಕು ಬಿಟ್ಟು ಬಾಯ್ದೆರೆದು ಬಿಕ್ಕುತ್ತಿದ್ದಳು. ನೋಡಿದ ಮರಿಯಪ್ಪನ ಕಣ್ಣುಗಳಲ್ಲಿ ನೀರು ಉಕ್ಕಿ ಬಂತು. ಪಳಕ್ಕನೆ ಎರಡು ಹನಿ ಕಣ್ಣುಗಳಿಂದ ಕೆಳಕ್ಕೆ ಬಿದ್ದು ಭೂಮ್ತಾಯಿಗೆ ಮುತ್ತಿಕ್ಕಿದ್ದವು. ಮಗನ ಎರಡು ಹನಿ ಕಣ್ಣೀರನ್ನು ಒಲ್ಲದ ಮನಸ್ಸಿನಿಂದ ಹೀರಿಕೊಂಡ ಭೂಮ್ತಾಯಿ ತಾನು ಅರಳಬಲ್ಲೆನೆಂದು ತೋರುತ್ತಿದ್ದಳು. ಹಣೆಗೆ ಕೈಕೊಟ್ಟು ಕುಕ್ಕರುಗಾಲಿನಲ್ಲಿ ನಡುಹೊಲದಲ್ಲಿ ಕುಳಿತಿದ್ದ ಮರಿಯಪ್ಪನಿಗೆ ನಿನ್ನೆ ಔಟಪ್ಪ ಸಾಹುಕಾರ ಹೇಳಿದ ಮಾತುಗಳು ನೆಪ್ಪಾಗಿ ಮತ್ತಷ್ಟು ದುಃಖ ಒತ್ತರಿಸಿಕೊಂಡು ಕಣ್ಣೀರು ಹೊರಬರತೊಡಗಿತು.

